ದೇಶದ ಮೊದಲ ಬುಲೆಟ್ ರೈಲು ಯೋಜನೆ ಶಂಕುಸ್ಥಾಪನೆಯಲ್ಲಿ ಮೋದಿ-ಅಬೆ

# ಸೆ.14ಕ್ಕೆ ಬುಲೆಟ್ ಶಿಲಾನ್ಯಾಸ

ಹೊಸ ದಿಗಂತ 12/9/17

▸ ಕರ್ಣಾವತಿ(ಅಹ್ಮದಾಬಾದ್),ಸೆ.11

ಭಾರತದ ಮೊಟ್ಟ ಮೊದಲ ಬುಲೆಟ್ ರೈಲು ಯೋಜನೆಯ, ಭೂಮಿ ಪೂಜೆಯನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಶಿಂಜೊ ಅಬೆ ಗುರುವಾರ ನಡೆಸಲಿದ್ದಾರೆ. ಆ ಮೂಲಕ ದೇಶದ ಲಕ್ಷಾಂತರ ಜನರ ವೇಗದ ಸಂಚಾರಕ್ಕೆ ಬುಲೆಟ್ ರೈಲು ಸಹಾಯವಾಗಲಿದೆ.

2014ರಲ್ಲಿ ಲೋಕಸಭಾ ಚುನಾವಣಾ ಕಾಲದಲ್ಲಿ ಮೋದಿಯವರು ನೀಡಿದ ಆಶ್ವಾಸನೆಗಳಲ್ಲಿ ಬುಲೆಟ್ ರೈಲು ಕೂಡ ಒಂದಾಗಿದೆ. ದೇಶದ ರೈಲ್ವೆ ವ್ಯವಸ್ಥೆಯ ಆಧುನೀಕರಣಕ್ಕೆ ಶತಕೋಟಿ ಡಾಲರ್ ಹೂಡಿಕೆ ಮಾಡುವ ಶಪಥ ಪ್ರಧಾನಿ ಮೋದಿ ಅವರದು. ಗುಜರಾತ್ ರಾಜಧಾನಿ ಅಹ್ಮದಾಬಾದ್ ದೇಶದ ಆರ್ಥಿಕ ಚಟುವಟಿಕೆ ಕೇಂದ್ರ. ಅಹ್ಮದಾಬಾದ್ - ಮುಂಬೈ ನಡುವೆ ಓಡುವ ಹೈಸ್ಪೀಡ್ ಬುಲೆಟ್ ರೈಲು ಯೋಜನೆಗೆ ಮೋದಿ ಹಾಗೂ ಅಬೆ ಗುರುವಾರ ಶಿಲಾನ್ಯಾಸ ಮಾಡುವರು. ಹೈಸ್ಪೀಡ್ ರೈಲು ಜಾಲಗಳಲ್ಲಿ ಜಪಾನ್ ಪ್ರಸಿದ್ಧ. ಜಪಾನ್ ದೇಶದ ಶಿಂಕಾನ್‌ಸೆನ್ ಬುಲೆಟ್ ರೈಲು ವಿಶ್ವದಲ್ಲೇ ಅತಿವೇಗದ ರೈಲು ಆಗಿದೆ. ಅಹ್ಮದಾಬಾದ್ - ಮುಂಬೈ ನಡುವಿನ ಬುಲೆಟ್ ರೈಲು ಯೋಜನೆಯ ಒಟ್ಟು ವೆಚ್ಚದಲ್ಲಿ ಶೇ. 85ನ್ನು ಜಪಾನ್ ಒದಗಿಸಲಿದೆ. ಜಪಾನ್ ಭಾರತಕ್ಕೆ 1,900 ಕೋಟಿ ಡಾಲರ್‌ಗಳ ಸರಳ ಬಡ್ಡಿಯ ಸುಲಭ ಸಾಲ ನೀಡಿದೆ. 2023 ಡಿಸೆಂಬರ್ ಒಳಗಡೆ ಯೋಜನೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಈ ಬುಲೆಟ್ ರೈಲಲ್ಲಿ ಏಕ ಕಾಲದಲ್ಲಿ 750 ಜನರು ಪ್ರಯಾಣಿಸಬಲ್ಲರು. ಉಭಯ ನಗರಗಳ ನಡುವೆ ಪ್ರಯಾಣದ ಅವಧಿ ಈಗಿನ 8 ತಾಸುಗಳಿಂದ 3-3.5 ತಾಸುಗಳಿಗೆ ಇಳಿಯಲಿದೆ. ಭಾರತದ ಸಾಂಪ್ರದಾಯಿಕ ರೈಲ್ವೆ ಜಾಲ ವಿಶ್ವದಲ್ಲಿ ನಾಲ್ಕನೇ ಅಗಾಧ ಪ್ರಮಾಣದ್ದಾಗಿದೆ. ಪ್ರತಿದಿನ 2.2 ಕೋಟಿ ಜನರು ರೈಲುಗಳಲ್ಲಿ ಸಂಚರಿಸುತ್ತಾರೆ. ರೈಲುಗಳಲ್ಲಿ ಕೆಲವೇ ಕೆಲವು ಮಾತ್ರ ಇಂದು ತಾಸಿಗೆ 100 ಮೈಲು ಓಡುವ ಎಕ್ಸ್‌ಪ್ರೆಸ್ ರೈಲುಗಳು ಆದರೂ ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ರೈಲ್ವೆ ಅಭಿವೃದ್ಧಿಗೆ ಭಾರೀ ವೇಗ ಲಭಿಸಿದೆ.



## ದೇಶಕ್ಕಾಗುವ ಪ್ರಯೋಜನ

▸ **1.ಸಿಮೆಂಟ್, ಉಕ್ಕು ಉದ್ಯಮಕ್ಕೆ ಉತ್ತೇಜನ:** ಈ ಯೋಜನೆಗೆ ಭಾರೀ ಪ್ರಮಾಣದ ಸಿಮೆಂಟ್ ಮತ್ತು ಉಕ್ಕು ಬೇಕಾಗಿದೆ. ಇದು ಉಕ್ಕು ಮತ್ತು ಸಿಮೆಂಟ್ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಬೇಡಿಕೆ ಸೃಷ್ಟಿಸುತ್ತದೆ. ಇವುಗಳನ್ನು ಸಾಗನೆ ಮಾಡುವ ಸಾರಿಗೆ ವ್ಯವಸ್ಥೆಯಲ್ಲೂ ವ್ಯವಹಾರ ಹೆಚ್ಚಾಗುತ್ತದೆ. ಈ ಯೋಜನೆಗೆ ಅಂದಾಜು 20 ಲಕ್ಷ ಟನ್ ಸಿಮೆಂಟ್ ಮತ್ತು 15 ಲಕ್ಷ ಮೆಟ್ರಿಕ್ ಟನ್ ಉಕ್ಕು ಬೇಕಾಗುತ್ತದೆ.

▸ **2.ಉದ್ಯೋಗ ಸೃಷ್ಟಿ:** ಈ ಕಾಮಗಾರಿ ವೇಳೆ 20,000 ಜನರಿಗೆ ಉದ್ಯೋಗ ಸಿಗಲಿದೆ. ರೈಲು ಸೇವೆ ಆರಂಭವಾದ ಬಳಿಕ 4,000 ಜನರಿಗೆ ರೈಲಿನ ನಿರ್ವಹಣೆಗೆ ನೇಮಿಸಲಾಗುತ್ತದೆ. ಇನ್ನೂ 16,000 ಜನರಿಗೆ ಪರೋಕ್ಷ ಉದ್ಯೋಗ ಸಿಗಲಿವೆ.

▸ **3.ತಂತ್ರಜ್ಞಾನದ ಅಭಿವೃದ್ಧಿ:** ಬುಲೆಟ್ ರೈಲ್‌ನಿಂದ ಹಲವು ಕ್ಷೇತ್ರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳು ದೇಶಕ್ಕೆ ಬರಲಿವೆ. ಟ್ರ್ಯಾಕ್ ಅಳವಡಿಕೆ, ಸಿಗ್ನಲ್ ಉಪಕರಣಗಳು, ವಿದ್ಯುತ್ ಸರಬರಾಜು, ಸಂವಹನ ತಂತ್ರಜ್ಞಾನಗಳ ಅಳವಡಿಕೆ, ಸಿಗ್ನಲ್ ಉಪಕರಣಗಳು, ವಿದ್ಯುತ್ ಸರಬರಾಜು, ಸಂವಹನ ತಂತ್ರಜ್ಞಾನಗಳ ಅಳವಡಿಕೆ, ವಿಶ್ವದರ್ಜೆಯ ತಂತ್ರಜ್ಞಾನಗಳ ಬಳಕೆ ದೇಶದಲ್ಲೂ ಆರಂಭವಾಗಲಿದೆ.

▸ **4.ಸುಲಭ ಸಂಚಾರ, ನಗರಾಭಿವೃದ್ಧಿ:** ಬುಲೆಟ್ ರೈಲ್‌ನಿಂದ ಸಂಚಾರ ಸುಲಭ ಹಾಗೂ ಸುಗಮವಾಗಲಿದ್ದು ನಗರದ ಹೊರಗೆಯೂ ಜನರು ಆರಾಮವಾಗಿ ಜೀವಿಸಬಹುದಾಗಿದೆ. ಪ್ರಮುಖ ನಗರಗಳ ಜತೆ ಬುಲೆಟ್ ರೈಲ್ ನಿಲ್ದಾಣಗಳ ಸಮೀಪದ ನಗರಗಳೂ ಅಭಿವೃದ್ಧಿಯಾಗಲಿವೆ. ಇವು ನಗರದ ಸಂಚಾರ ದಟ್ಟಣೆ, ಒತ್ತಡವನ್ನು ಕಡಿಮೆ, ಇಂಧನ ಉಳಿತಾಯ, ಪರಿಸರ ಮಾಲಿನ್ಯ ಕಡಿಮೆ ಮಾಡಲಿವೆ.

▸ **5.ಸಮಯ ಉಳಿತಾಯ** : ಮುಂಬೈ– ಅಹ್ಮದಾಬಾದ್ ನಡುವಿನ ಬುಲೆಟ್ ರೈಲ್‌ನಿಂದ ಮುಂಬೈ ಮತ್ತು ಸಬರಮತಿ ನಡುವಿನ ಪ್ರಯಾಣದ ಅವಧಿ 2 ಗಂಟೆ ಕಡಿಮೆಯಾಗುತ್ತದೆ. ಈಗ ಇದೇ ದೂರಕ್ಕೆ ಕ್ರಮಿಸಲು 8 ಗಂಟೆಗಳು ಬೇಕು. ಈಗ 40,000 ಜನರು ಪ್ರತಿದಿನ ಪ್ರಯಾಣಿಸಿದರೆ, ಮುಂದಿನ ದಿನ 1,56,000 ಜನರು ಪ್ರಯಾಣಿಸುವರು.

▸ **6.ಪ್ರಯಾಣಿಕರ ಸುರಕ್ಷತೆ** : ಜಪಾನ್‌ನ ಶಿಂಕಾನ್ಸೆನ್ ಕಂಪನಿ ವಿನ್ಯಾಸ ಮಾಡಿದೆ. ಕಳೆದ 50 ವರ್ಷಗಳಲ್ಲಿ ಈ ಕಂಪನಿ ಯಾವುದೇ ಅಪಘಾತಕ್ಕೆ ಗುರಿಯಾದ ದಾಖಲೆ ಹೊಂದಿಲ್ಲ. ಈ ಯೋಜನೆಯಲ್ಲಿ ಪ್ರಾಕೃತಿಕ ವೈಫಲ್ಯವನ್ನು ಹಿಮ್ಮೆಟ್ಟಿಸುವ ವಿನ್ಯಾಸ ಮಾಡಲಾಗುತ್ತದೆ. ಲೆವೆಲ್ ಕ್ರಾಸಿಂಗ್‌ಗಳು ಇರುವುದಿಲ್ಲ, ಭೂಕಂಪವಾದರೆ ಮೊದಲೇ ಸೂಚನೆ ನೀಡುವ ವ್ಯವಸ್ಥೆಯಿದ್ದು, ರೈಲು ಸ್ವಯಂಚಾಲಿತವಾಗಿ ನಿಲ್ಲಲಿದೆ.

12/09/2017 12/09/2017

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN No: U04010KA2002SGC030438

ಸಂಖ್ಯೆ : ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಕ-22/2016-17/2890 ದಿನಾಂಕ:31.08.2017

### ಅಂತಿಮ ಮರುಕರೆ ಪ್ರಕಟಣೆ

**ಶ್ರೀ. ಡಿ. ಸುರೇಶ್**, ಬಿನ್ ಸಿ. ದಾಸೇಗೌಡ, ಕಿರಿಯ ಮಾಪಕ, ಓದುಗ, 1ನೇ ಪೂರ್ವ ಉಪವಿಭಾಗ, ಶಿವಾಜಿನಗರ ವಿಭಾಗ, ಬೆವಿಕಂ, ಬೆಂಗಳೂರು ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನೀವು ದಿನಾಂಕ: 01.11.2013 ರಿಂದ ಇಲ್ಲಿಯವರೆಗೂ ಕಂಪನಿಯ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಈ ಕಚೇರಿಯಿಂದ ಪತ್ರ ಸಂಖ್ಯೆ : ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಕ-22/2016-17/5516-16/31.10.2015 ರಲ್ಲಿ ಅಂತಿಮ ನೋಟೀಸನ್ನು ಜಾರಿ ಮಾಡಲಾಗಿತ್ತು.

ಆದರೂ ಸಹ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಈ ಪತ್ರಿಕಾ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಈ ಪ್ರಕಟಣೆಯನ್ನು ಅಂತಿಮ ಕರೆಯೋಲೆ ಪತ್ರವೆಂದು ಪರಿಗಣಿಸಿ ಕವಿಪ್ರನಿನಿ ಮಂಡಳಿಯ ನೌಕರರ (ವಶಿನಿ ಮತ್ತು ಮಾ) ನಿಬಂಧನೆಗಳು 1987ರ ನಿಯಮಾವಳಿಯ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ಪರಿಹಾರ ನೀಡದೆ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗುವುದು.

ವಿದ್ಯುತ್ ಸಂಬಂಧಿತ ದೂರುಗಳಿಗಾಗಿ ದೂರವಾಣಿ ಸಂಖ್ಯೆ : 1912

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ.)
ಶಿವಾಜಿನಗರ ವಿಭಾಗ, ಲಾಜರ್ ರೋಡ್, ಬೆಂಗಳೂರು-05

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN No: U04010KA2002SGC030438

ಸಂಖ್ಯೆ : ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಕ-22/2016-17/2889 ದಿನಾಂಕ:31.08.2017

### ಅಂತಿಮ ಮರುಕರೆ ಪ್ರಕಟಣೆ

**ಶ್ರೀ. ಮೊಹಮದ್ ಹನೀಫ್**, ಬಿನ್ ಮೊಹಮದ್ ಮಹಬೂಬ್, ಕಿರಿಯ ಮಾರ್ಗದಾಳು, 5ನೇ ಪೂರ್ವ ಉಪವಿಭಾಗ, ಶಿವಾಜಿನಗರ ವಿಭಾಗ, ಬೆವಿಕಂ, ಬೆಂಗಳೂರು ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನೀವು ದಿನಾಂಕ: 13.01.2016 ರಿಂದ ಇಲ್ಲಿಯವರೆಗೂ ಕಂಪನಿಯ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಈ ಕಚೇರಿಯಿಂದ ಪತ್ರ ಸಂಖ್ಯೆ : ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಕ-22 2016-17/5013-15/17.12.2016 ರಲ್ಲಿ ಅಂತಿಮ ನೋಟೀಸನ್ನು ಜಾರಿ ಮಾಡಲಾಗಿತ್ತು.

ಆದರೂ ಸಹ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಈ ಪತ್ರಿಕಾ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಈ ಪ್ರಕಟಣೆಯನ್ನು ಅಂತಿಮ ಕರೆಯೋಲೆ ಪತ್ರವೆಂದು ಪರಿಗಣಿಸಿ ಕವಿಪ್ರನಿನಿ ಮಂಡಳಿಯ ನೌಕರರ (ವಶಿನಿ ಮತ್ತು ಮಾ) ನಿಬಂಧನೆಗಳು 1987ರ ನಿಯಮಾವಳಿಯ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ಪರಿಹಾರ ನೀಡದೆ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗುವುದು.

ವಿದ್ಯುತ್ ಸಂಬಂಧಿತ ದೂರುಗಳಿಗಾಗಿ ದೂರವಾಣಿ ಸಂಖ್ಯೆ : 1912

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ.)
ಶಿವಾಜಿನಗರ ವಿಭಾಗ, ಲಾಜರ್ ರೋಡ್, ಬೆಂಗಳೂರು-05

## ವಿದ್ಯುತ್ ಕಂಬ: ಅಪಾಯಕ್ಕೆ ಆಹ್ವಾನ



